ವಿಷಯವೇನೆಂದರೆ, ಹರಿವ ನೀರೆಷ್ಟು ಶುದ್ಧವೋ ನಿಂತ ನೀರು ಅಷ್ಟೇ ಕೊಳಚೆಯೆಂದು ನಮಗೆ ಅರ್ಥವಾಗುವುದೇ ಇಲ್ಲ. ಫಂಗಸು ಬೆಳೆಯುವುದು, ಪಾಚಿಗಟ್ಟುವುದು... ಇತ್ಯಾದಿ ಹಳಸುವ ಕೊಳೆಯುವ ಕ್ರಿಯೆಯಷ್ಟೂ ಜರುಗುವುದೇ ನಿಂತ ನೀರಲ್ಲೆಂದು ಗೊತ್ತಿದ್ದೂ, ಪದೇ ಪದೇ ನೀರು ಚೆಲ್ಲಿ ನೆಲವೊಣಗಿಸದೆ ತೇವ ಕಾಯುವ ಮಡಿಯನ್ನು ಮಡಿಯೆಂದೆಂತು ಬಗೆಯುವುದು? ಈ ಪರಿಯ ಉದಕಶಾಂತಿಯನ್ನೂ ಪುಣ್ಯಾಹವನ್ನೂ ಸರಿಯೆಂತೆಂದು ಹೇಗೆ ಹೇಳುವುದು? 'ನಿಮ್ಮಗಳ ಪೂಜೆ ಹೇಗಂದರೆ ಸಾರಿಸಿ, ಗುಡಿಸಿ, ರಂಗೋಲಿಯಿಕ್ಕಿ, ಎಲ್ಲವನ್ನೂ ಒಪ್ಪಗೈದು... ಆಮೇಲೆ ಎಲ್ಲೆಲ್ಲೂ ನೀರು ಅಕ್ಷತೆ ಚೆಲ್ಲಿ ಮನೆ ಕೊಳೆಸುವುದಲ್ಲವೆ?' ಎಂದು ಛೇಡಿಸಬೇಕೆನಿಸುವುದು. ಅಕಸ್ಮಾತ್ ಛೇಡಿಸಿದೆನೋ, ಹಬ್ಬದ ಮನೆಯಲ್ಲಿ ಬಾಂಬುಗಳೆದ್ದು ಮನಸ್ಸು ಚಿತ್ರಾನ್ನವಾಗುವುದು! ಇವೆಲ್ಲವೂ ವ್ಯಾವಸಾಯಿಕ ಜಗತ್ತಿನಲ್ಲಾದ ಪರಿಪಾಠಗಳು; ಪಳೆಯುಳಿಕೆಯೆಂಬಂತೆ ನಮ್ಮಲ್ಲಿನ್ನೂ ಮಿಕ್ಕುಬಿಟ್ಟಿದೆಯಷ್ಟೆ... ಎಂದು ನಿಧಾನವಾಗಿ ಹೇಳಿದರೂ, ನನ್ನ ಅಮ್ಮ, ತಾನೇ ಒಮ್ಮೆಂದೊಮ್ಮೆ ಸಿಡಿದು ನನ್ನನ್ನು ಹೋಳಾಗುವಳು. ನನ್ನ ಹೆಂಡತಿಯಂತೂ, 'ಇದು ತನ್ನ ನಂಬಿಕೆ... ಅಡ್ಡಬರಬೇಡ!' ಎಂಬಂತಾಡಿ, ತನ್ನ ಮೂಲಭೂತ ಹಕ್ಕಿಗೇ ಚ್ಯುತಿಯಾಯಿತೆಂಬಂತೆ ಕನಲುವಳು.

ಇನ್ನು, ಅಸ್ಸಾಮು ಕಡೆಯ ಈ ತಪಸ್ಸು, ಇವರಿಬ್ಬರ ನಂಬುಗೆಗಳ ಸಾಕಾರವೇ ತಾನೆಂಬಂತೆ ನಮ್ಮೊಡನೆ ಬದುಕುವನು. ಅವನಿದ್ದೆಡೆಯೆಲ್ಲ ಒದ್ದೆ! ಸರಿದಲ್ಲಿ ಮಲನೀರು! ಚೂರೂ ನೀರುಳಿಸದ ಹಾಗೆ ಕೆಲಸ ಮಾಡೆಂದು ಕೂಗಾಡಿದರೆ, ನಾನು ಎದುರಿರುವಾಗ ಮಾತ್ರ ಪಾಲಿಸುವನು. ಉಳಿದಂತೆ ತನ್ನದೇ ತಾನು! ನನ್ನ ಆಫೀಸುಮೇಜನ್ನು ಹೊಸಿಲು ತೊಳೆಯುವ ಹಾಗೆ ಬಳಿದಿಡುವನು. ಬದಿಮೇಜಿನಲ್ಲಿನ ಕಪಾಟುಗಳನ್ನು ನೀರುಗ್ಗಿ ಸಾರಿಸುವನು. ಕಂಪ್ಯೂಟರಿನ ಮಾನೀಟರುಗಳ ಮೇಲೆ ಒದ್ದೆಯೊಣಗಿದ ಪಟ್ಟೆಗಳು ಆಗಾಗ ಎದ್ದು ಕಾಣುವವು. ನನ್ನ ಮೇಜುಬದಿಯ ಕಿಟಕಿಗಾಜಂತೂ ಒರೆಸಿ ಒಣಗಿದ ಮೇಲೆ, ಥರಾವರಿ ಚಿತ್ತಾರದಿಂದ ಶೋಭಿಸುವುದು. ಬಯ್ದಾಡಿ ಬಡಿದುಕೊಂಡರೆ, ವಾರದ ಮಟ್ಟಿಗೆ ಮಾತ್ರ ಎಲ್ಲವೂ ಸುಸೂತ್ರವಿರುವುದು. ಯಾವಾಗ ನನ್ನ ಕೆಲಸ ಹೆಚ್ಚಿ ನಿಗಾ ತಗ್ಗಿತೋ, ಪುನಃ ಪುನಃ ಅದದೇ ನೀರ್ಚಾಳಿ ಮರುಕಳಿಸುವುದು! 'ಸಾಬ್ ಜೀ, ಜಗತ್ತಿನ ಪಾಪ ತೊಳೆಯಲಿಕ್ಕಿರುವ ಏಕೈಕ ಸಾಧನವೆಂದರೆ ಜಲವಲ್ಲವೆ? ನಿಮಗೇಕೆ ನೀರು ಕಂಡರೆ ಅಷ್ಟು ತಾತ್ಸಾರ?!' ಎಂದು ಶುದ್ಧ ಹಿಂದಿಯಲ್ಲಿ, ನಾನು ಶಾಂತವಾಗಿರುವಾಗ ಬಳಿಸುಳಿದು ಅರಿಕೆಯಿಡುವನು. ಈ ಪರಿಯ ಮಾತುಗಳಿಗೆ ನನ್ನ ಮನಸ್ಸು ಮೋಡಿಹೋದಂತಾಗುವುದು. ಚಂದದ ಭಾಷೆಯು ನನ್ನ ಯಾವೊತ್ತಿನ ದೌರ್ಬಲ್ಯವೇ ಆದ್ದರಿಂದ, ಇಂತಹ ಸು'ಸಂಸ್ಕೃತ' ಮಾತು, ನನ್ನನ್ನು ಮೈಮರೆಸಿ ಅವಾಕ್ಕಾಗಿಸುವುದು! ಒಟ್ಟಾರೆ, ಇವನು ಕೈಕೊಂಡ 'ಜಲದೋಷ'ಗಳನ್ನು, ನಾನಲ್ಲ, ನನ್ನೊಳಗಿನ 'ಭಾಷಾವಾರು' ಸಂತೋಷವೇ ಮಾಫು ಮಾಡುವುದು!!

ತಪಸ್ಸಿನ ಜಲಲೀಲೆಯ ಪರಾಕಾಷ್ಠೆಯೂ ಈಚೆಗೊಮ್ಮೆ ಜರುಗಿಹೋಯಿತು. ಎರಡು ತಿಂಗಳ ಹಿಂದಿನ ಹುಣ್ಣಿಮೆಯಂದು ಚಂದ್ರಗ್ರಹಣ. ಮನೆಯೊಳಗಿನ ಸಕಲ ಸರಂಜಾಮಿನ ಮೇಲೆಲ್ಲ ದರ್ಭೆಯಿರಿಸುವುದೆಂದು ನನ್ನಮ್ಮನ ಆದೇಶವಾಗಿತ್ತು. ಫ್ರಿಡ್ಜು, ಒಲೆ, ಊಟದ ಮೇಜು, ಮಂಚ, ಟೀವಿ... ಹೀಗೆಲ್ಲೆಲ್ಲೂ ದರ್ಭೆಯ ಕಡ್ಡಿ ರಾರಾಜಿಸಿದವು. ಅಮ್ಮನ ಸಾಧಾರಣ ಮಾತನ್ನೂ ಉತ್ಪ್ರೇಕ್ಷಿಸಿ ಪಾಲಿಸುವ ತಪಸ್ಸು, ನನ್ನ ಆಫೀಸಿನಲ್ಲೆಲ್ಲೂ ಗ್ರಹಣ ಹಿಡಿಯದಂತೆ ಎಚ್ಚರ ತಾಳಿದ. ಮುಂಜಾಗ್ರತೆ ಕೈಕೊಂಡ. ಇನ್ನು, ಮರುದಿವಸ ಗ್ರಹಣಶುದ್ಧಿ. ಮನೆಯಲ್ಲಿನ